

ನರ್ಸ್‌ಗಳಿಗೆ ಸಲಾಂ!

ಹೋಗೋಣ ಅಂತ ಬಂದಿರುವೆ' ಅಂದರು. 'ತಾತ, ಡ್ರೆಸ್ಸಿಂಗ್ ರೂಮ್ ಬೇರೆ ಇದೆ. ಅಲ್ಲಿ ಹೋಗ್ಬೇಕು' ಅಂದೆ. ಅದಕ್ಕೆ ತಾತಪ್ಪ – 'ಹೋಗಿದ್ದೆ ಸಾರ್, ಅದು ಕ್ಲೋಸಾಗಿದೆ. ಇನ್ನು ಸೋಮವಾರವೇ ಓಪನ್ ಆಗೋದಂತೆ. ಅದ್ಕೆ ಇಲ್ಲಿಗೆ ಬಂದೆ' ಅಂತ ಮಾತು ಮುಗಿಸಿ ಮಲಗಿದರು. 'ನಿಮ್ಮ ಹೆಸರೇನು?' ಅಂತ ಕೇಳಿದೆ. ರಾಮಪ್ಪ ಅಂದರು. ಆಮೇಲೆ ಸರ್ಜರಿ ಡ್ಯೂಟಿ ಡಾಕ್ಟರ್‌ರನ್ನು ಕರೆದೆ. ಡ್ರೆಸ್ಸಿಂಗ್ ಟ್ರಾಲಿ ರೆಡಿಯಾಗಿತ್ತು. ಅಷ್ಟೊತ್ತಿಗೆ ಇನ್ನೊಬ್ಬ ಡಾಕ್ಟರ್ ಒಳಗೆ ಬಂದು ಪೇಷೆಂಟ್ ನೋಡಿ, 'ಓ ಇವರಾ? ಡ್ರೆಸ್ಸಿಂಗ್ ಪ್ಯಾಡ್ಸ್ ಬಹಳ ಬೇಕಾಗುತ್ತವೆ. ಮತ್ತೆ ತುಂಬ ಬ್ಯಾಡ್ ಸ್ಮೆಲ್ ಬರುತ್ತೆ. ಬೇಗ ಬೇಗ ಮುಗಿಸಿ ಕಳಿಸಿ' ಅಂತ ಹೇಳಿಹೋದರು. ಸರ್ಜಿಕಲ್ ಬ್ಲೇಡ್ ಓಪನ್ ಮಾಡಿ ಡಾಕ್ಟರ್ ಕೈಗೆ ಕೊಟ್ಟೆ. ಅವರು ಒಂದೊಂದೇ ಬಿಳಿಯ ಪದರುಗಳನ್ನು ಸುತ್ತುತ್ತ ಸುತ್ತುತ್ತ ತೆಗೆಯುವಾಗ ನಾನು ಪೇಷಂಟ್ ಕಾಲನ್ನು ಮೇಲೆತ್ತಿ ಹಿಡಿದುಕೊಂಡಿದ್ದೆ. ಪೂರ್ತಿ ತೆಗೆದಾದ ಮೇಲೆ ಕೆಳಗಿಟ್ಟೆ. ಕಾಲಿನ ಪಾದವೇ ಕಾಣಿಸುತ್ತಿರಲಿಲ್ಲ. ಬದಲಿಗೆ ಕೊಳೆಯುತ್ತಿರುವ ಮಾಂಸಖಂಡ ಕಾಣುತ್ತಿದ್ದವು. ಅದರಿಂದ ಬಿಳಿಯ ಹುಳಗಳು ಬುದುಬುದುನೆ ಅಂತ ಹೊರಗುರುಳಿ ಕೆಳಗಿಟ್ಟ ಬಕೆಟ್‌ನ ಪ್ಲಾಸ್ಟಿಕ್ ಚೀಲ ಸೇರುತ್ತಿದ್ದವು. ಎರಡನೇ ಕಾಲಿನ ಪರಿಸ್ಥಿತಿಯೂ ಅದೇ ರೀತಿಯಾಗಿತ್ತು.

ಆ ತಾತನಿಗೆ ನಾನು ಸುಮ್ಮನೆ ಕೇಳಿದೆ: 'ತಾತಾ, ನಿಮಗೆ ಯಾರೂ ಇಲ್ವಾ ನೋಡ್ಕೊಳ್ಳೋಕೆ?'. ಅದಕ್ಕವರು, 'ಇದಾನಪ್ಪ, ನನಗೆ ದೇವರಿದ್ದಾನೆ. ಆ ಶಿವನೇ ನನಗೆಲ್ಲ. ಅವನ ಬಿಟ್ಟರೆ ಇನ್ಯಾರಿಲ್ಲಪ್ಪ' ಎಂದರು. 'ಮನೆ ಮಕ್ಳು ಇಲ್ಲವಾ?' ಎಂದು ಮತ್ತಷ್ಟು ಕೆದಕಿ ಕೇಳಿದೆ. 'ಇದೆ ಕಣಪ್ಪ. ಮನೆ, ಇಬ್ಬರು ಮಕ್ಳು ಇದಾರೆ. ಯಾರೂ ನೋಡಲ್ಲ. ಅದ್ಕೆ ಎಲ್ಲ ಬಿಟ್ಟು ಬಂದು ಇಲ್ಲಿದೀನಿ' ಅಂದರು. ಹುಣ್ಣಿನ ಮೇಲೆ ಔಷಧಿ ಸುರಿದು ಸ್ವಚ್ಛ ಮಾಡಿ, ಎರಡೂ ಕಾಲಿಗೆ ಪಟ್ಟಿ ಕಟ್ಟಿ ಕಳಿಸಲಾಯ್ತು. 'ನಿಂಗ್ಯಾರಿಲ್ವ?' ಎನ್ನುವ ಪ್ರಶ್ನೆಗೆ ಅವರು ಕೊಟ್ಟ ಉತ್ತರ ಈಗಲೂ ನನಗೆ ಆಗಾಗ ನೆನಪಾಗುತ್ತಲೇ ಇರುತ್ತದೆ. ಇಂಥ ಅದೆಷ್ಟೋ ಘಟನೆಗಳು ನನ್ನ ವೃತ್ತಿಬದುಕಿನ ದಿನಗಳಲ್ಲಿ ಎದುರಾಗಿವೆ.

ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ, ಮೂರು ತಿಂಗಳ ಮಗುವಿಗೆ ಕೋವಿಡ್–19 ಪಾಸಿಟಿವ್ ರಿಪೋರ್ಟ್ ಬಂದಿತ್ತು. ಐಸಿಯುನಲ್ಲಿ ಅಡ್ಮಿಟ್ ಮಾಡಿದ್ದರು. ಆ ಮಗುವಿನ ತಾಯಿಗೆ ಅದು ಮೊದಲ ಕೂಸು. ಆಕೆ ದುಃಖದ ಮಡುವಿನಲ್ಲಿ ಮುಳುಗಿದ್ದಳು. ಒಂದೇ ಸಮನೆ ಕಣ್ಣೀರು ಸುರಿಸುತ್ತಿದ್ದಳು. ನಾನೂ ಕೋವಿಡ್ ವಾರ್ಡ್‌ನಲ್ಲಿಯೇ ಕರ್ತವ್ಯ ನಿರ್ವಹಿಸುತ್ತಿದ್ದೆ. ಆ ಮಗುವಿನ ಸಲುವಾಗಿಯೇ ಬೇರೆ ಶುಶ್ರೂಷಕ, ಡಾಕ್ಟರ್ ಇದ್ದರು. ನಾನು ನೋಡುತ್ತಿರುವ ಪೇಷಂಟ್ ಪಕ್ಕದಲ್ಲಿಯೇ ಆ ಮಗು ಇತ್ತು. ಹೀಗಾಗಿ ಆಗಾಗ ಮಗುವನ್ನು ಗಮನಿಸುತ್ತಿದ್ದೆ. ಆ ಮಗುವನ್ನು ನೋಡಿಕೊಳ್ಳುವ ಜವಾಬ್ದಾರಿ ನನ್ನ ಗೆಳೆಯನದಾಗಿತ್ತು. ಟ್ರೀಟ್‌ಮೆಂಟ್ ಕೊಡುತ್ತಿರುವಾಗ, ಮಗುವಿನ ತಾಯಿ ಬಂದು ಅಳುತ್ತ ನಿಂತಳು.

'ಯಾಕಮ್ಮ ಇಷ್ಟೊಂದು ಅಳ್ತಿದ್ದೀರಿ? ಸಮಾಧಾನ ಮಾಡಿಕೊಳ್ಳಿ' ಅಂದೆ. ಅದಕ್ಕವಳು – 'ಏನಂತ ಸಮಾಧಾನ ಮಾಡ್ಕೊಳ್ಬೇಕು ಹೇಳಿ? ಈ ಮಗುವಿಗೆ ಜನ್ಮ ಕೊಟ್ಟ ದಿನದಿಂದ ಒಂಚೂರೂ ನೆಮ್ಮದಿಯಿಲ್ಲ. ಒಂದರ ಮೇಲೆ ಇನ್ನೊಂದು ಕಷ್ಟಗಳು ಬರುತ್ತಿವೆ. ಹುಟ್ಟಿದಾಗ ಒಂದು ಶ್ವಾಸಕೋಶ ಇಲ್ಲ ಅಂದ್ರು. ಆಮೇಲೆ ಹೃದಯದ ತೊಂದರೆ ಅಂದ್ರು. ಈಗ ಮೊನ್ನೆ ಹೃದಯದಲ್ಲಿ ರಂಧ್ರ ಇದೆ ಎಂದು ಆಪರೇಷನ್ ಮಾಡಿಸಿದ್ದೆ. ಈಗ ಕೋವಿಡ್ ಪಾಸಿಟಿವ್. ಈ ಮಗೂಗೇ ಯಾಕ್ ಇಷ್ಟೊಂದು ಕಷ್ಟ ಬರಬೇಕು? ನಂಗಾದ್ರೂ ಪಾಸಿಟಿವ್ ಬಂದಿದ್ರೆ ಆಗಿರ್ತಿತ್ತು. ಈಗ ಡಾಕ್ಟರ್, ಮಗು ಬದುಕುವುದು ಖಚಿತವಿಲ್ಲ ಅಂತಿದಾರೆ' ಎಂದು ಮತ್ತೆ ಅಳುವುದಕ್ಕೆ ಶುರುಮಾಡಿದಳು.

'ನೋಡಮ್ಮ, ಅವರು ಹೇಳಿರುವುದೆಲ್ಲವೂ ಸತ್ಯವೇ. ಆದ್ರೆ ಮೇಲೊಬ್ಬ ಇದ್ದಾನೆ. ಅವನ ಮೇಲೆ ಎಲ್ಲ ಭಾರ ಹಾಕಿ ಸುಮ್ಮನಿದ್ದುಬಿಡು. ನೋಡೋಣ ಏನಾಗುತ್ತದೆ ಅಂತ. ಯಾಕಂದ್ರೆ ಅವನಿಗೆ ಅಸಾಧ್ಯವಾದದ್ದು ಯಾವುದೂ ಇಲ್ಲ' ಅಂದೆ. ಅದಕ್ಕವಳು ತುಸು ಸಮಾಧಾನಗೊಂಡಂತೆ ಕಂಡಿತು.

ನನ್ನ ಗೆಳೆಯ 'ಆ ಮಗು ಉಳಿಯಲ್ಲ ಅಂತ ಹೇಳಿದ್ದಾರೆ. ನಿಂಗೆ ಗೊತ್ತಿದೆಯಲ್ವಾ?' ಎಂದು ಕೇಳಿದ. ವಿಷಯ ನನಗೂ ಗೊತ್ತಿತ್ತು. ಆದರೆ ಆ ತಾಯಿಗೆ ಸಮಾಧಾನ ಮಾಡಲು ಬೇರೆ ದಾರಿ ತೋರದೆ ನಾನು ಹಾಗೆ ಹೇಳಿದ್ದೆ. ಆದರೆ ನಾನು ಆಡಿದ ಮಾತು ನಿಜ ಅನಿಸುವಂಥ ಘಟನೆಯೇ ನಡೆಯಿತು. ಆ ದಿನದ ಕರ್ತವ್ಯ ಮುಗಿಸಿ ಮನೆಗೆ ಹೋದೆ. ಮತ್ತೆ ನನಗೆ ಮುಂದಿನ ವಾರವೇ ಕೋವಿಡ್ ಡ್ಯೂಟಿ. ಮುಂದಿನ ವಾರ ಅಲ್ಲಿಗೆ ಹೋದಾಗ ಆ ಮಗು ಇರಲಿಲ್ಲ. ಮನಸ್ಸಿಗೆ ಖೇದವಾಯ್ತು. ಆದರೆ ಅಲ್ಲೇ ಇದ್ದ ನನ್ನ ಗೆಳೆಯನಿಗೆ ನನ್ನ ಮನಸ್ಸಿನ ಮಾತು ಅರ್ಥವಾಗಿರಬೇಕು. ಖುಷಿಯಿಂದ, 'ಆ ಮಗು ಹುಷಾರಾಯ್ತು ಕಣೋ. ಡಿಸ್ಚಾರ್ಜ್ ಮಾಡಿಸಿಕೊಂಡು ಹೋದರು' ಎಂದು ಹೇಳಿದ. ಮನಸೊಳಗಿನ ವಿಷಾದವೆಲ್ಲ ಮರೆಯಾಗಿ ಒಂದು ರೀತಿಯ ಆಹ್ಲಾದ ತುಂಬಿಕೊಂಡಿತು. ಮಗುವನ್ನು ವಾಪಸ್ ಕರೆದುಕೊಂಡು ಹೋಗುವಾಗ ಆ ತಾಯಿಯ ಮುಖದಲ್ಲಿ ಎಂಥ ನಿರಾಳಭಾವ ನೆಲೆಸಿರಬಹುದು! ದೇವರಿಗೆ ನಿಂತಲ್ಲೇ ವಂದನೆ ಸಲ್ಲಿಸಿದೆ.

ನನ್ನ ವೃತ್ತಿಬದುಕಿನಲ್ಲಿ ಎದುರಾದ ಕೆಲವು ಘಟನೆಗಳು ಬದುಕಿನ ಕುರಿತಾದ ನಂಬಿಕೆಯನ್ನು ಅಲ್ಲಾಡಿಸಿವೆ. ಇನ್ನು ಕೆಲವು, ಬದುಕಿನ ನಂಬಿಕೆಗಳನ್ನು ಇನ್ನಷ್ಟು ಗಟ್ಟಿಯಾಗಿಸಿವೆ. ಉಳಿದ ಕೆಲಸಗಳಲ್ಲಿ ಹುಟ್ಟು–ಸಾವುಗಳೆಲ್ಲ ವೈಯಕ್ತಿಕ ಬದುಕಿನಲ್ಲಿ ಬಂದು ಹೋಗುವ ಸಂಗತಿಗಳು. ಆದರೆ ನನ್ನ ಕೆಲಸವೇ ಹುಟ್ಟು–ಸಾವುಗಳ ಜೊತೆಗೆ ಹೆಣೆದುಕೊಂಡಿದೆ. ಬದುಕನ್ನು ಅರ್ಥ ಮಾಡಿಕೊಳ್ಳಲಿಕ್ಕೆ ಇದಕ್ಕಿಂತ ಒಳ್ಳೆಯ ಕೆಲಸ ಬೇರೆ ಯಾವುದಿದ್ದೀತು? ■